ಪ್ರಜಾವಾಣಿ

Friday, December 4th, 2009

ರಕ್ತ ಸಂಬಂಧದ ಮದುವೆ ಅಂಗವೈಕಲ್ಯಕ್ಕೆ ದಾರಿ

ಬೆಂಗಳೂರು: 'ಅಂಗವಿಕಲ ಮತ್ತು ಬುದ್ಧಿ ಮಾಂದ್ಯ ಮಕ್ಕಳ ಹುಟ್ಟಿಗೆ ರಕ್ತ ಸಂಬಂಧದ ಮದುವೆಗಳೇ ಪ್ರಮುಖ ಕಾರಣ. ಅವನ್ನು ನಿಲ್ಲಿಸಲು ಇಡೀ ಸಮಾಜವೇ ಕಾರ್ಯೋನ್ಮುಖವಾಗಬೇಕಿದೆ' ಎಂದು ರಕ್ತಸಂಬಂಧ ಮದುವೆ ವಿರೋಧಿ ಆಂದೋಲನದ ಪ್ರಚಾರಕಿ ಡಾ.ನಾಜೂ ವರ್ಕಿ ಅಭಿಪ್ರಾಯಪಟ್ಟರು.

ವಿಶ್ವಸಂಸ್ಥೆ ಮಾಹಿತಿ ಕೇಂದ್ರದ 'ಬ್ರದರ್‌ಹುಡ್' ಹಾಗೂ ನವದೆಹಲಿಯ ನ್ಯಾಷನಲ್ ಟ್ರಸ್ಟ್‌ಗಳ ಸಹಯೋಗದೊಂದಿಗೆ ಜೈನ್ ವಿಶ್ವವಿದ್ಯಾಲಯದ ಸಮುದಾಯ ರೇಡಿಯೋ ಆಕ್ಟಿವ್ ಮತ್ತು ಸಮೂಹ ಸಂವಹನ ಸ್ನಾತಕೋತ್ತರ ವಿಭಾಗದ ಆಶ್ರಯದಲ್ಲಿ ಏರ್ಪಡಿಸಿದ್ದ ಅಂಗವೈಕಲ್ಯ ಕುರಿತ ವಿಶೇಷ ಚಿತ್ರೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

'ರಕ್ತಸಂಬಂಧದ ಮದುವೆಗಳು ಮತ್ತು ಅಂಗವೈಕಲ್ಯದ ಕುರಿತ ಸಂಶೋಧನಾ ಕಾರ್ಯದಲ್ಲಿ ಇಪ್ಪತ್ತು ವರ್ಷಗಳಿಂದ ತೊಡಗಿಕೊಂಡಿದ್ದೇನೆ. ಸಮೀಪ ಬಂಧುಗಳ ನಡುವೆ ಮದುವೆಗಳಿಂದಾಗುವ ತೊಂದರೆಗಳ ಬಗ್ಗೆ ಹೆಚ್ಚೆಚ್ಚು ಜನ ಜಾಗೃತಿ ಮೂಡಿಸಬೇಕಾಗಿದೆ' ಎಂದು ಅವರು ಹೇಳಿದರು.

'ರೇಡಿಯೋ ಆಕ್ಟಿವ್'ನ ತರಬೇತಿ ಮತ್ತು ಅಭಿವೃದ್ಧಿ ವಿಭಾಗದ ವ್ಯವಸ್ಥಾಪಕಿ ಪಿಂಕಿ ಚಂದ್ರನ್ ಮಾತನಾಡಿ, 'ಅಂಗವೈಕಲ್ಯ ದೇವರ ಶಾಪವಲ್ಲ. ಅಂಗವಿಕಲರು ತಮ್ಮ ಕೊರತೆಗಳನ್ನು ಮರೆತು ಸಹಜವಾಗಿ ಆತ್ಮವಿಶ್ವಾಸದಿಂದ ಬಾಳಲು ಸಮಾಜ ಸಹಕರಿಸಬೇಕು' ಎಂದು ಕರೆ ನೀಡಿದರು.

ಜೈನ್ ವಿಶ್ವವಿದ್ಯಾಲಯದ ಸಮುದಾಯ ರೇಡಿಯೋ ಆಕ್ಟಿವ್ ಮತ್ತು ಸಮೂಹ ಸಂವಹನ ಸ್ನಾತಕೋತ್ತರ ವಿಭಾಗದ ಆಶ್ರಯದಲ್ಲಿ ಬೆಂಗಳೂರಿನಲ್ಲಿ ಗುರುವಾರ ನಡೆದ ಅಂಗವೈಕಲ್ಯ ಕುರಿತ ವಿಶೇಷ ಚಿತ್ರೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅಂಗವಿಕಲ ಮಕ್ಕಳೊಂದಿಗೆ ಜೈನ್ ವಿ.ವಿ. ಚಾನ್ಸಲರ್ ಡಾ.ಚೆನ್‌ರಾಜ್ ಜೈನ್ ಮಾತನಾಡುತ್ತಿರುವುದು. ರಕ್ತಸಂಬಂಧ ಮದುವೆ ವಿರೋಧಿ ಆಂದೋಳನದ ಪ್ರಚಾರಕಿ ಡಾ.ನಾಜೂ ವರ್ಕಿ ಅವರೂ ಚಿತ್ರದಲ್ಲಿ ಇದ್ದಾರೆ. -ಪ್ರಜಾವಾಣಿ ಚಿತ್ರ

ಜೈನ್ ವಿಶ್ವವಿದ್ಯಾಲಯದ ಚಾನ್ಸಲರ್ ಡಾ.ಚೆನ್‌ರಾಜ್ ಜೈನ್ ಮಾತನಾಡಿ, 'ಮಾಧ್ಯಮ ವಿಭಾಗದ ವಿದ್ಯಾರ್ಥಿಗಳು ಅಂಗವಿಕಲರ ವಿಷಯದ ಬಗ್ಗೆ ಚಿತ್ರೋತ್ಸವ ಸಂಘಟಿಸಿರುವುದು ಶ್ಲಾಘನೀಯ ಕೆಲಸ' ಎಂದು ಅವರು ಹೇಳಿದರು.

'ಅಸೋಸಿಯೇಷನ್ ಆಫ್ ಪೀಪಲ್ ಡಿಸೇಬಲಿಟಿ'ಯ (ಎಪಿಡಿ) ನಿರ್ದೇಶಕ ಡಾ.ಬಸವರಾಜು, ಶಾಂತ ಮಹಿಳಾ ಸಮಾಜದ ಶಾಂತಮ್ಮ ಮೊದಲಾದವರು ಉಪಸ್ಥಿತರಿದ್ದರು. ದೆಹಲಿಯ 'ವಿಕೇರ್' ಸಂಸ್ಥೆಯ ಸಹಕಾರದೊಂದಿಗೆ ವಿಶೇಷ ಚಿತ್ರಗಳನ್ನು ಪ್ರದರ್ಶಿಸಲಾಯಿತು. ಶಾಂತ ಮಹಿಳಾ ಸಮಾಜದ ಸದಸ್ಯರು ಭಾಗವಹಿಸಿದ್ದರು.